# ಕೊಹ್ಲಿಗೆ ನಾಯಕತ್ವದ ಒತ್ತಡ

ವಿರಾಟ್ ಕೊಹ್ಲಿ ದಾಖಲೆಗಳ ಮೇಲೆ ದಾಖಲೆ ಬರೆಯುತ್ತಿದ್ದಾರೆ. ಆದರೆ ತೀರಾ ಇತ್ತೀಚೆಗೆ ನಾಯಕತ್ವದ ಒತ್ತಡ ಹೆಚ್ಚಿದಂತೆ ಕಾಣಿಸುತ್ತಿದೆ. ವಿದೇಶಿ ನೆಲದಲ್ಲಿ ಕ್ರಿಕೆಟ್ ತಂಡವನ್ನು ಯಶಸ್ವಿಯಾಗಿ ಮುನ್ನಡೆಸಲು ಸಾಧ್ಯವಾಗುತ್ತಿಲ್ಲವೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ಅದರಲ್ಲೂ ಟಿ20, ಏಕದಿನ ಮತ್ತು ಟೆಸ್ಟ್ ಮೂರೂ ತಂಡಗಳ ನಾಯಕನಾಗಿರುವುದು ಅವರ ಮೇಲೆ ಭಾರ ಹೆಚ್ಚಿಸಿದೆಯೇ ಎನ್ನುವ ಅನುಮಾನ ಕೆಲವರಲ್ಲಾದರೂ ಮೂಡಿದೆ. ಆ ಮೂಡನ್ನು ಗ್ರಹಿಸಿದವರಂತೆ, ಕೊಹ್ಲಿಯೇ ತಾವೇ ಮುಂದಾಗಿ, ಯಾವುದಾದರೊಂದು ತಂಡದ ನಾಯಕತ್ವ ಬಿಟ್ಟುಕೊಡುವ ಸುಳಿವನ್ನು ನೀಡಿದ್ದಾರೆ. ಇದರಿಂದ ಬ್ಯಾಟಿಂಗ್ ಮೇಲೆ ಒತ್ತಡ ಕಡಿಮೆಯಾಗಿ ಇನ್ನಷ್ಟು ವೈಯಕ್ತಿಕ ಸಾಧನೆಗಳನ್ನು ಮಾಡಲು ಅನುಕೂಲ ಎನ್ನುವುದು ಲೆಕ್ಕಾಚಾರ. ಈ ಹಿಂದೆ ನಾಯಕರಾಗಿದ್ದ ಮಹೇಂದ್ರಸಿಂಗ್ ಧೋನಿ ಅವರಿಗೆ ಇಂತಹ ಪ್ರಶ್ನೆ ಎದುರಾದಾಗ, ಅವರು ಟೆಸ್ಟ್ ನಾಯಕತ್ವವನ್ನು ಮೊದಲು ಬಿಟ್ಟುಕೊಟ್ಟಿದ್ದರು. ಅದೇ ರೀತಿ ಕೊಹ್ಲಿಯೂ ಮಾಡಬಹುದೆ? ಆದರೆ ಟೆಸ್ಟ್ ಬಗ್ಗೆ ಕೊಹ್ಲಿಗೆ ವಿಶೇಷ ಒಲವು ಇದ್ದಂತಿದೆ. ಇತ್ತೀಚೆಗೆ 'ಹಗಲು–ರಾತ್ರಿ' ಟೆಸ್ಟ್‌ಗಳಿಗೆ ಮಹತ್ವ ಹೆಚ್ಚುತ್ತಿದೆ. 'ಟೆಸ್ಟ್ ಪಂದ್ಯಗಳೇ ನಿಜವಾದ ಕ್ರಿಕೆಟ್‌ನ ಘನತೆಯನ್ನು ಬೆಳೆಸುವಂಥದ್ದು' ಎಂದು ಸ್ವತಃ ಕೊಹ್ಲಿ ಹೇಳಿಕೆ ಬೇರೆ ನೀಡಿದ್ದಾರೆ. ಟಿ20 ಮಾದರಿಯ ಪಂದ್ಯಗಳ ಬಗ್ಗೆಯೂ ಕೊಹ್ಲಿಗೆ ವಿಶೇಷ ಒಲವಿದೆ. ಹಾಗಾಗಿ ನಾಯಕತ್ವ ಬಿಟ್ಟುಕೊಡುವುದೇ ಆದರೆ ಏಕದಿನ ಪಂದ್ಯ ತಂಡದ್ದನ್ನು ಬಿಟ್ಟುಕೊಡಬಹುದು ಎನ್ನಲಾಗುತ್ತಿದೆ.

ಏಕದಿನ ಪಂದ್ಯಗಳಲ್ಲಿ ಭಾರತದ ಅತ್ಯುತ್ತಮ ನಾಯಕ ಎನ್ನುವ ಬಿರುದು ಈಗಾಗಲೇ ಕೊಹ್ಲಿಗೆ ಲಭಿಸಿದೆ. ಒಟ್ಟು 60 ಏಕದಿನ ಪಂದ್ಯಗಳಲ್ಲಿ ಕೊಹ್ಲಿ ನಾಯಕತ್ವ ವಹಿಸಿದ್ದು 44ರಲ್ಲಿ ತಂಡ ಜಯ ಸಾಧಿಸಿದೆ. ಏಕದಿನ ಪಂದ್ಯಗಳ ಇತಿಹಾಸದಲ್ಲೇ ಭಾರತದ ಇತರ ನಾಯಕರಿಗೆ ಹೋಲಿಸಿದರೆ, ಶೇ 75.42ರಷ್ಟು ಗೆಲುವಿನ ಶೇಕಡಾವಾರು ಹೊಂದಿರುವುದು ಕೊಹ್ಲಿಯ ದಾಖಲೆ. ಅಲ್ಲದೆ ಐಸಿಸಿ ವಿಶ್ವಕಪ್ ಈ ವರ್ಷ ನಡೆಯಲಿದ್ದು ಕೊಹ್ಲಿ ಮೊದಲ ಬಾರಿಗೆ ಭಾರತ ತಂಡದ ನಾಯಕತ್ವ ವಹಿಸಲಿದ್ದಾರೆ.

ಹಾಗೆ ನೋಡಿದರೆ, ಟಿ20 ಪಂದ್ಯಗಳಲ್ಲೂ ಕೊಹ್ಲಿ ನಾಯಕತ್ವದ ಸಾಧನೆ ಉತ್ತಮವಾಗಿದೆ. ಕೊಹ್ಲಿ ನಾಯಕತ್ವ ವಹಿಸಿದ 37 ಟಿ20 ಪಂದ್ಯಗಳಲ್ಲಿ 24ರಲ್ಲಿ ಭಾರತ ಗೆಲುವು ಸಾಧಿಸಿದೆ. ಯಶಸ್ಸಿನ ಶೇಕಡಾವಾರು 64.86 ಕಡಿಮೆಯೇನಲ್ಲ. 2 ಪಂದ್ಯಗಳು ರೋಚಕ ಟೈ ಕಂಡಿವೆ. ಆದರೆ ರೋಹಿತ್ ಶರ್ಮಾ ನಾಯಕತ್ವ ವಹಿಸಿದ 14 ಟಿ20 ಪಂದ್ಯಗಳಲ್ಲಿ 12ರಲ್ಲಿ ಭಾರತ ಜಯ ಗಳಿಸಿರುವುದು ಯಶಸ್ಸಿನ ಶೇಕಡಾವಾರಿನಲ್ಲಿ ರೋಹಿತ್ ಮೇಲುಗೈ ಸಾಧಿಸಿದ್ದಾರೆ. ಅಂಕಿ ಅಂಶಗಳನ್ನು ಗಮನಿಸಿದರೆ ಸದ್ಯಕ್ಕೆ ಕೊಹ್ಲಿ ಟಿ20 ನಾಯಕತ್ವವನ್ನು ಬಿಟ್ಟುಕೊಡಬಹುದು ಎನ್ನುವವರೂ ಇದ್ದಾರೆ.

ವೈಯಕ್ತಿಕ ಬ್ಯಾಟಿಂಗ್ ದಾಖಲೆಯ ಮಟ್ಟಿಗೆ ಕೊಹ್ಲಿಯನ್ನು ಮೀರಿಸುವ ಇನ್ನೊಬ್ಬ ಭಾರತೀಯನಿಲ್ಲ. ಹಿಂದೆ ದಾಖಲೆಗಳನ್ನು ಬರೆದವರನ್ನೆಲ್ಲ ಕೊಹ್ಲಿ ಹಿಂದಿಕ್ಕಿ ಮುಂದೆ ಬಂದಿದ್ದಾರೆ. ಭಾರತೀಯ ಕ್ರಿಕೆಟಿಗರ ಪೈಕಿ ಟೆಸ್ಟ್ ರೇಟಿಂಗ್‌ನಲ್ಲಿ (937 ಪಾಯಿಂಟ್), ಏಕದಿನ ಪಂದ್ಯ




ರೇಟಿಂಗ್‌ನಲ್ಲಿ (911 ಪಾಯಿಂಟ್ಸ್) ಮತ್ತು ಟಿ20 ರೇಟಿಂಗ್‌ನಲ್ಲಿ (897) ಕೊಹ್ಲಿಯೇ 'ನಂಬರ್ ಒನ್.' ಏಕದಿನ ಪಂದ್ಯಗಳಲ್ಲಿ ವಿಶ್ವದಲ್ಲೇ ಕೊಹ್ಲಿ 'ನಂಬರ್ ಒನ್' ಬ್ಯಾಟ್ಸ್‌ಮನ್. ಟೆಸ್ಟ್ ರ‍್ಯಾಂಕಿಂಗ್‌ನಲ್ಲೂ ಅವರು ಮೊದಲ ಸ್ಥಾನ ಉಳಿಸಿಕೊಂಡಿದ್ದಾರೆ.

ಕೊಹ್ಲಿ ನಾಯಕತ್ವ ವಹಿಸಿ ಅದಾಗಲೇ ಏಳು ವರ್ಷಗಳು ಉರುಳಿವೆ. ಮಹೇಂದ್ರಸಿಂಗ್ ಧೋನಿ 9 ವರ್ಷಗಳ ಕಾಲ ಏಕದಿನ ತಂಡದ ನಾಯಕರಾಗಿದ್ದು ಲೆಕ್ಕ ಹಾಕಿದರೆ, ನಾಯಕತ್ವ ಬಿಟ್ಟುಕೊಡಲು ಕೊಹ್ಲಿ ಅವಸರ ಮಾಡಬೇಕಾಗಿಲ್ಲ ಎನ್ನುವುದು ಅವರ ಅಭಿಮಾನಿಗಳ ವಾದ. ಭಾರತದ ಕ್ರಿಕೆಟ್ ಆಯ್ಕೆ ಮಂಡಳಿಯೂ ಕೊಹ್ಲಿಯ ನಾಯಕತ್ವ ನಿವೃತ್ತಿಯ ಬಗ್ಗೆ ತುಟಿಪಿಟಕ್ ಎಂದಿಲ್ಲ. ಏಕೆಂದರೆ ನಾಯಕನಾಗಿದ್ದೂ ಎಲ್ಲ ಒತ್ತಡಗಳನ್ನು ಮೀರಿ ಕೊಹ್ಲಿ ಹೆಚ್ಚಿನ ಪಂದ್ಯಗಳಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನವನ್ನು ದಾಖಲಿಸುತ್ತಲೇ ಬಂದಿದ್ದಾರೆ. 2019ರಲ್ಲಿ ಎಲ್ಲ ಮೂರು ವಿಧದ ಕ್ರಿಕೆಟ್ ಪಂದ್ಯಗಳಲ್ಲಿ ಕೊಹ್ಲಿ ಒಟ್ಟು 2455 ರನ್‌ಗಳನ್ನು ಗಳಿಸಿದ್ದು ಅದರಲ್ಲೂ ಅಗ್ರಸ್ಥಾನದಲ್ಲಿದ್ದಾರೆ. ನಾಯಕನಾಗಿದ್ದೂ ವೈಯಕ್ತಿಕ ಬ್ಯಾಟಿಂಗ್‌ನಲ್ಲಿ ಅತ್ಯಧಿಕ ರನ್ ಸೇರಿಸುವ ಸಾಧನೆ ಮಾಡಿರುವ ಕೊಹ್ಲಿಯನ್ನು ಯಾವುದೇ ಪ್ರಕಾರದ ತಂಡದ ನಾಯಕತ್ವದಿಂದ ಕೈಬಿಡಲು ಆಯ್ಕೆ ಸಮಿತಿಗೂ ಯಾವುದೇ ಕಾರಣಗಳಿಲ್ಲ. ಇತ್ತೀಚೆಗಷ್ಟೇ ಏಕದಿನ ಪಂದ್ಯಗಳಲ್ಲಿ ತನ್ನ 39ನೇ ಶತಕ ದಾಖಲಿಸಿ, ಟಾಪ್‌ನಲ್ಲಿರುವ ಕೊಹ್ಲಿ, ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಒಟ್ಟು 64 ಶತಕಗಳನ್ನು ದಾಖಲಿಸಿದ್ದಾರೆ. ಇದನ್ನು ದೊಡ್ಡ ಪಾಲು 2013ರಲ್ಲಿ ಆತ ನಾಯಕತ್ವ ವಹಿಸಿದ ನಂತರವೇ ಬಂದಿರುವುದು ಎನ್ನುವುದು ಗಮನಾರ್ಹ. ವಿಶ್ವಕಪ್‌ಗೆ ಮುನ್ನವೇ ಕೊಹ್ಲಿ ನಾಯಕನಾಗಿ ಇನ್ನೆರಡು ವೈಯಕ್ತಿಕ ದಾಖಲೆಗಳನ್ನು ಮೀರುವ ಸನಿಹದಲ್ಲಿದ್ದಾರೆ. ನಾಯಕನಾಗಿದ್ದು ಅತ್ಯಧಿಕ ಪಂದ್ಯಶ್ರೇಷ್ಠ ಪ್ರಶಸ್ತಿಗಳನ್ನು ಗೆದ್ದಿರುವ ರಿಕಿ ಪಾಂಟಿಂಗ್ ದಾಖಲೆ (28 ಸಲ) ಮೀರಲು ಕೊಹ್ಲಿಗೆ ಇನ್ನು ಒಂದು ಪಂದ್ಯಶ್ರೇಷ್ಠ ಪ್ರಶಸ್ತಿಯಷ್ಟೇ ಬಾಕಿ ಇದೆ. ಹಾಗೆಯೇ ನಾಯಕನಾಗಿ ಎಲ್ಲ ಮೂರು ಪ್ರಕಾರದ ಪಂದ್ಯಗಳಲ್ಲಿ ಒಟ್ಟು 41 ಶತಕಗಳನ್ನು ಗಳಿಸಿರುವ ಪಾಂಟಿಂಗ್ ದಾಖಲೆಯನ್ನು ಕೊಹ್ಲಿ ಸರಿಗಟ್ಟಿದ್ದು ಶೀಘ್ರವೇ 42ನೇ ಶತಕ ದಾಖಲಿಸುವ ಕ್ಷಣವನ್ನು ಎದುರು ನೋಡುತ್ತಿದ್ದಾರೆ. ಇಷ್ಟೆಲ್ಲ ಸಾಧನೆಗಳ ಹಿರಿಮೆ ಇರುವಾಗ ಕೊಹ್ಲಿ ಯಾವ ಪ್ರಕಾರದಲ್ಲೂ ಭಾರತದ ನಾಯಕತ್ವ ಬಿಟ್ಟುಕೊಡಬೇಕಾದ ಅನಿವಾರ್ಯತೆ ಇದೆಯೆ?

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65